ಓ ಎಸ ನಂ.96/2023

ಪಿ.ಡಬ್ಲ್ಯೂ-1 ರಮಾ ತಂದೆ ಪ್ರಹ್ಲಾದ ರಾವ್ ಕುಲಕರ್ಣಿ

**(ಇಂದು ದಿನಾಂಕಃ 21-06-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

ಪಾಟೀ ಸವಾಲುಃ ಶ್ರೀ ಕೆ ವಿ ವಕೀಲರಿಂದ.

ನಾನು ಬಿಕಾಂ ಓದಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ಆದರೆ ಮಾತನಾಡಲು ಗೊತ್ತು. ನನ್ನ ಮುಖ್ಯ ವಿಚಾರಣೆಯಲ್ಲಿರುವ ಸಹಿ ನನ್ನದೆ ಆಗಿರುತ್ತದೆ. ನನ್ನ ಮುಖ್ಯ ವಿಚರಣೆಯ ವಿಚಾರಗಳನ್ನು ನಾನು ಹೇಳಿದ ಮೇರೆಗೆ ನಮ್ಮ ವಕೀಲರು ತಯಾರಿಸಿರುತ್ತಾರೆ. ನನ್ನ ಮುಖ್ಯ ವಿಚಾರಣೆಯ ವಿಷಯಗಳು ಸಂಪೂರ್ಣವಾಗಿ ನನಗೆ ಮಾಹಿತಿ ಇರುತ್ತದೆ. ದಾವಾ ಆಸ್ತಿಗಳು ನಮ್ಮ ತಂದೆಯವರ ಆಸ್ತಿಗಳು ಆಗಿರುತ್ತವೆ. ನಮ್ಮ ತಂದೆಯವರಿಗೆ ಅವರ ಹಿರಿಯರಿಂದ ದಾವಾ ಆಸ್ತಿಗಳು ಬಂದಿರುತ್ತವೆ. ನಮ್ಮ ತಂದೆಯ ಹೆಸರು ಪ್ರಹ್ಲಾದ ರಾವ್ ಕುಲಕರ್ಣಿ ಆಗಿರುತ್ತದೆ. ನಮ್ಮ ತಾತನ ಹೆಸರು ಗೋವಿಂದರಾವ್ ಕುಲಕರ್ಣಿ ಆಗಿರುತ್ತದೆ. ನಮ್ಮ ತಾತ ಗೋವಿಂದರಾವ್ ಕುಲಕರ್ಣಿರವರಿಗೆ ನಮ್ಮ ತಂದೆ ಒಬ್ಬನೇ ಮಗನಾಗಿರುತ್ತಾನೆ. ಗೋವಿಂದರಾವ್ ರವರು ನಮ್ಮ ತಂದೆಯನ್ನು ದತ್ತಕ ಪಡೆದುಕೊಂಡಿರುತ್ತಾರೆ. ಗೋವಿಂದರಾವ್ ರವರು ನಮ್ಮ ತಂದೆಯನ್ನು ದತ್ತಕ ಪಡೆದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ.

2. ನಮ್ಮ ತಂದೆ ನಿಜವಾದ ತಂದೆಯ ಹೆಸರು ನನಗೆ ಗೊತ್ತಿಲ್ಲ, ಸಾಕ್ಷಿ ನಮ್ಮ ತಂದೆ ಚಿಕ್ಕವರಿದ್ದಾಗಲೇ ಗೋವಿಂದರಾವ್ ರವರಿಗೆ ದತ್ತಕ ಹೋಗಿರುತ್ತಾರೆ ಎನ್ನುತ್ತಾರೆ. ನಮ್ಮ ತಂದೆಯ ಖಾಸಾ ಅಣ್ಣತಮ್ಮಂದಿರು ಎಷ್ಟು ಜನ ಎಂದು ನನಗೆ ಗೊತ್ತಿಲ್ಲ. ನಮ್ಮ ನಿಜವಾದ

ತಾತನ ಹೆಸರು ವೆಂಕಟೇಶ ಜೋಷಿ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆಯ ನಿಜವಾದ ಅಡ್ಡ ಹೆಸರು ಜೋಷಿಯಾಗಿರುತ್ತದೆ ಎಂದರೆ ಸರಿಯಲ್ಲ. ನಮ್ಮ ತಂದೆಗೆ ಹನಮಂತರಾವ್ ಮತ್ತು ಕೇಶವ್ ಎಂಬ 2 ಜನ ಸಹೋದರರು ಮತ್ತು ಗಂಗಾಬಾಯಿ ಮತ್ತು ಅಂಬಕ್ಕ ಯಾನೆ ಪ್ರಭಾವತಿ ಎಂಬ ಸಹೋದರಿಯರು ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಚಾರಗಳು ನನಗೆ ಗೊತ್ತಿದ್ದರು ನಾನು ಅವರೊಂದಿಗೆ ಒಡನಾಟ ಹೊಂದಿದ್ದರು ಈಗ ಅವರ ಬಗ್ಗೆ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹನಮಂತರಾವ್ ಮತ್ತು ಕೇಶವರವರು ಜೀವಿತಾ ಇರುತ್ತಾರೆ ಎಂದರೆ ? ಇರಬಹುದು. ಅವರಿಗೆ ಪಾಲು ಹೋಗುತ್ತದೆ ಎಂದು ನಾವು ಉದ್ದೇಶಪೂರ್ವಕವಾಗಿ ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ಗಂಗುಬಾಯಿ ಮತ್ತು ಅಂಬಕ್ಕರವರು ಈಗ ಮತೃರಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

3. ನಮ್ಮ ತಂದೆ ಜುಲೈ 2018 ರಲ್ಲಿ ಮೃತರಾಗಿರುತ್ತಾರೆ. ನಿಪಿ-15 ನಮ್ಮತಂದೆಯ ಮರಣ ಪ್ರಮಾಣ ಪತ್ರ ಆಗಿರುತ್ತದೆ ಎಂದರೆ ಸರಿ. ನಿಪಿ-15 ರಲ್ಲಿ ನಮ್ಮ ತಾತನ ಹೆಸರು ವೆಂಕಟೇಶ ಮತ್ತು ಅಜ್ಜಿಯ ಹೆಸರು ಲಕ್ಷ್ಮೀಬಾಯಿ ಎಂದು ನಮೂದು ಇರುತ್ತದೆ ಎಂದರೆ ಸರಿ. ಸಾಕ್ಷಿ ಅದು ಗೋವಿಂದ ಆಗಬೇಕಿತ್ತು ಎನ್ನುತ್ತಾರೆ. ನಮ್ಮ ತಂದೆ ಡಿ ಎಲ್ ಆರ್ ಎಲ್ ನಲ್ಲಿ ಕೇಂದ್ರ ಸರಕಾರದ ನೌಕರನಾಗಿದ್ದರು. ನಮ್ಮ ತಂದೆಯ ಸೇವಾ ದಾಖಲೆಗಳಲ್ಲಿ ಅವರ ತಂದೆಯ ಹೆಸರು ಏನು ನಮೂದೆ ಇದೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆಯ ಸೇವಾ ದಾಖಲೆಗಳಲ್ಲಿ ಅವರ ತಂದೆಯ ಹೆಸರು ಏನು ನಮೂದು ಆಗಿದೆ ಎಂದು ದಾಖಲೆಗಳು ಸಿಕ್ಕರೆ ನಾನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ನಮ್ಮ ತಂದೆಯ ಸೇವಾ ದಾಖಲೆಗಳಲ್ಲಿ ಅವರ ತಂದೆಯ ಹೆಸರು ವೆಂಕಟೇಶ ಜೋಷಿ ಎಂದು ನಮೂದು ಇರುತ್ತದೆ ಎಂದರೆ ನನಗೆ

ಗೊತ್ತಿಲ್ಲ. ನಮ್ಮ ತಂದೆಯ ಹೆಸರಿನಲ್ಲಿ ದಾವಾ ಆಸ್ತಿಗಳು ಇದ್ದ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನಮ್ಮ ತಾತನ ಹೆಸರಿನಿಂದ ನಮ್ಮ ತಂದೆಯ ಹೆಸರಿನಲ್ಲಿ ದಾವಾ ಆಸ್ತಿಗಳು ಬಂದಿರುತ್ತವೆ. ಆ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ನಾನು ಸಲ್ಲಿಸಿಲ್ಲ. ನಮ್ಮ ತಂದೆಗೆ ಯಾವ ರೀತಿ ಆಸ್ತಿ ಬಂದಿರುತ್ತದೆ ಎಂದು ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ದಾಖಲೆಗಳು ಇಲ್ಲದೆ ಸುಳ್ಳು ಕೇಸು ಹಾಕಿರುತ್ತೇನೆ ಎಂದರೆ ಸರಿಯಲ್ಲ.

4. ನಿಪಿ-1 ರ ಪಹಣಿಯಲ್ಲಿ ಕರಣಂ ಅನುರಾಧಮ್ಮ ಗಂಡ ಗೋವಿಂದರಾಜ ಕುಲಕರ್ಣಿರವರ ಹೆಸರು ನಮೂದು ಇರುತ್ತದೆ ಎಂದರೆ ಸರಿ. ಕರ್ನಾಟಕ ನೀರಾವರಿ ನಿಗಮದವರು ಭೂಸ್ವಾಧೀನಪಡಿಸಿಕೊಂಡ ಬಗ್ಗೆ ಅವರ ಹೆಸರಿನಲ್ಲಿಯೂ ಕೂಡಾ ನಿಪಿ-1 ಪಹಣಿ ಇರುತ್ತದೆ ಎಂದರೆ ? ಇರಬಹುದು. ಸರ್ವೆ ನಂ.83 ರ ಜಮೀನಿನಲ್ಲಿ ಸರಕಾರದವರು 31 ಗುಂಟೆ ಜಮೀನು ಭೂಸ್ವಾಧೀನ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ನಾನು ಭೂಸ್ವಾಧೀನವಾದ ಜಮೀನಿನ ಕುರಿತು ಕರ್ನಾಟಕ ಸರಕಾರದವರನ್ನು ನಾನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ. ನಮ್ಮ ತಂದೆ ಕರ್ನಾಟಕ ಬ್ಯಾಂಕಿನಲ್ಲಿ ಸಾಲ ಪಡೆದಿದ್ದರು ಎಂದು ನಾನು ಕೇಳಿರುತ್ತೇನೆ. ಸದರಿ ಸಾಲ ಈಗ ಮುಟ್ಟಿರುತ್ತದೆ. ನಮ್ಮ ತಂದೆಯವರ ಸಾಲ ಇನ್ನು ಬಾಕಿ ಇರುವುದಾಗಿ ನಿಪಿ-1 ರ ಪಹಣಿಯಲ್ಲಿ ನಮೂದು ಇದೆ ಎಂದರೆ ಸಾಕ್ಷಿ ಜಮೀನಿನ ಉತ್ಪನ್ನ ತಿನ್ನುತ್ತಿದ್ದು, ಅವರೇ ಅದನ್ನು ಕಟ್ಟಬೇಕು ಎನ್ನುತ್ತಾರೆ. ಸಾಲವನ್ನು ನಮ್ಮ ತಂದೆ ಯಾವಾಗ ಪಡೆದಿದ್ದರು ಎಂದು ನನಗೆ ಹೇಳಲು ಗೊತ್ತಿಲ್ಲ. ನಮ್ಮ ತಂದೆ ಎಲ್ಲಾ ಜಮೀನುಗಳ ಮೇಲೆ ಸಾಲ ಪಡೆದಿರುತ್ತಾರೆ ಮತ್ತು ಅದು ಇನ್ನೂ ಬಾಕಿ ಇದೆ ಎಂದರೆ ಸಾಕ್ಷಿ ಇರಬಹುದು ಎನ್ನುತ್ತಾರೆ.

5. ಸರ್ವೆ ನಂ.43 ರಲ್ಲಿ ಸರಕಾರದವರು ಎಷ್ಟು ಜಮೀನು ಭೂಸ್ವಾಧೀನ ಮಾಡಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ.41 ನಮ್ಮ ಅಣ್ಣನ ಹೆಸರಿನಲ್ಲಿ ಇರುತ್ತದೆ, ಅದು 28 ಎಕರೆ ಮೇಲೆ ಗುಂಟೆ ಜಮೀನು ಇರುತ್ತದೆ. ಅದು ಯಾವಾಗ ವರ್ಗಾವಣೆಯಾಗಿದೆ ಎಂದು ನನಗೆ ಗೊತ್ತಿಲ್ಲ. 2009 ರಲ್ಲಿ ಸರ್ವೆ ನಂ.41 ರ ಮೇಲೆ ನಮ್ಮ ತಂದೆ ಸಾಲ ಪಡೆದಿರುತ್ತಾರೆ ಎಂದರೆ ಸಾಕ್ಷಿ ಸಾಲ ಪಡೆದದ್ದು ಗೊತ್ತು ಆದರೆ ಯಾವ ಸರ್ವೆ ನಂಬರ ಎಂದು ಗೊತ್ತಿಲ್ಲ ಎನ್ನುತ್ತಾರೆ. ನಿಪಿ-5 ರಲ್ಲಿ ಕೆಜಿಬಿ ಬ್ಯಾಂಕ್ ಕಲ್ಲೂರ ಶಾಖೆಯಲ್ಲಿ ಸರ್ವೆ ನಂ.41 ರ ಜಮೀನು ಅಡಮಾನ ಮಾಡಿದ ಬಗ್ಗೆ ನಮೂದು ಇದೆ ಎಂದರೆ ಇರಬಹುದು. ಬ್ಯಾಂಕಿನವರನ್ನು ನಾನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ. ಸಾಕ್ಷಿ ನಾನು ಸಾಲ ತೀರಿಸಿರುತ್ತಾರೆ ಎಂದು ತಿಳಿದುಕೊಂಡಿರುತ್ತೇನೆ ಎನ್ನುತ್ತಾರೆ. ನಿಪಿ-7 ರ ವಿಚಾರಗಳು ನನಗೆ ಗೊತ್ತು.

6. ದಾವಾ ಸ್ವತ್ತುಗಳಾದ ಡಿ ಮತ್ತು ಇ ಆಸ್ತಿಗಳ ದಾಖಲೆಗಳನ್ನು ನಾನು ಸಲ್ಲಿಸಿರುತ್ತೇನೆ. ದಾವಾ ಸಲ್ಲಿಸುವಾಗಲೇ ಸದರಿ ದಾಖಲೆಗಳನ್ನು ನಾನು ಹಾಜರುಪಡಿಸಿರುತ್ತೇನೆ. ನಿಪಿ-7 ರಲ್ಲಿ ಕ್ಲೆಮೆಂಟರವರ ಹೆಸರು ರಾಮುಲು ಮತ್ತು ವೆಂಕಟೇಶ್ವರಲು ಇರುತ್ತದೆ. ದಾಖಲೆ ಸಂಖ್ಯೆ 3075/1985 (2) ಇರುತ್ತದೆ. ನಿಪಿ-11 ರ ದಾಖಲೆಗೆ ಇರುವ ನಕ್ಷೆ ಹೈದ್ರಾಬಾದನಲ್ಲಿರುವ ನಮ್ಮ ಮನೆ ನಕ್ಷೆಯಾಗಿರುತ್ತದೆ. ನಿಪಿ-11 ರ ದಾಖಲೆಯ ಜೊತೆಗಿರುವ ನಕ್ಷೆಯಡಿ ನಮ್ಮ ತಂದೆಯ ಹೆಸರು ಪ್ರಹ್ಲಾದರಾವ್ ತಂದೆ ವೇಂಕಟೇಶ ಎಂದು ನಮೂದು ಆಗಿರುತ್ತದೆ.

7. ದಾವಾ ಆಸ್ತಿಗಳು ಮೊದಲು ಪದ್ಮಾವತಿರವರ ಹೆಸರಿನಲ್ಲಿ ಇದ್ದವು ಎಂದರೆ ಸರಿ. ಪದ್ಮಾವತಿರವರ ಹೆಸರಿನಿಂದ ನಮ್ಮ ತಂದೆಯ ಹೆಸರಿನಲ್ಲಿ ಹೇಗೆ ಆಸ್ತಿಗಳು ಬಂದಿರುತ್ತವೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಸಾಕ್ಷಿ ಪದ್ಮಾವತಿರವರು ನಮ್ಮ ಅಜ್ಜಿಯಾಗಿರುತ್ತಾರೆ

ಎನ್ನುತ್ತಾರೆ. ಎ ಯಿಂದ ಸಿ ದಾವಾ ಆಸ್ತಿಗಳು ನಮ್ಮ ಹಿರಿಯರಿಂದ ಬಂದ ಮತ್ತು ಜಂಟಿ ಕುಟುಂಬದ ಆಸ್ತಿಗಳೆಂದು ನಾನು ವಾದಪತ್ರದಲ್ಲಿ ನಮೂದಿಸಿರುತ್ತೇನೆ ಎಂದರೆ ಸರಿ. ನಮ್ಮ ತಂದೆ ಕುಟುಂಬ ವ್ಯವಸ್ಥಾಪನೆ ಕರಾರು ಮಾಡಿದ ಕುರಿತು ನಾನು ಯಾವುದೇ ದಾಖಲೆಗಳನ್ನು ಹಾಕಿಲ್ಲ. ಸಾಕ್ಷಿ ನಮ್ಮ ತಂದೆ ಹೇಳಿದ್ದರು ಆದರೆ ಅವರು ಅಚಾನಕ್ಕಾಗಿ ಸಾವಿಗೀಡಾದರು ಎನ್ನುತ್ತಾರೆ. ನಮ್ಮ ತಂದೆ ಆ ರೀತಿ ಕರಾರು ಯಾವ ದಿನಾಂಕದಂದು ಮಾಡಿದ್ದರು ಎಂದು ಹೇಳಲು ಗೊತ್ತಿಲ್ಲ. ಸಾಕ್ಷಿ ಆದರೆ ಒಂದು ಸಾರಿ ಕರೆದುಕೊಂಡು ಬಂದು ತೋರಿಸಿದ್ದರು ಎನ್ನುತ್ತಾರೆ. ನಮ್ಮ ತಂದೆ ನಾನು ಹೇಳಿದಂತೆ ಯಾವುದೇ ಕುಟುಂಬ ವ್ಯವಸ್ಥಾಪನಾ ಕರಾರು ಮಾಡಿರಲಿಲ್ಲ ಎಂದರೆ ಸರಿಯಲ್ಲ.

8. ನಮ್ಮ ಅಣ್ಣನನ್ನು ದಾವೆ ಹಾಕುವ ಮೊದಲು ಪಾಲು ಕೇಳಿದ್ದೆ. ನಮ್ಮ ತಂದೆ ಮೃತರಾದ ವರ್ಷದಲ್ಲಿ ಪಾಲು ಕೇಳಿರುತ್ತೇನೆ, ನಿಖರವಾದ ದಿನಾಂಕ ನನಗೆ ಹೇಳಲು ಗೊತ್ತಿಲ್ಲ. ನಾನು ಪಾಲು ಕೇಳಿ ಯಾವುದೇ ಲೀಗಲ್ ನೋಟಿಸು ನಮ್ಮ ಅಣ್ಣನಿಗೆ ನೀಡಿಲ್ಲ. ನಿಪಿ-12 ದಾಖಲೆ ಪ್ಲಾಟ ನಂ.9030 ಆಸ್ತಿಯದ್ದಾಗಿರುತ್ತದೆ. ನಿಪಿ-13 ದಾಖಲೆಯಲ್ಲಿ ನಮ್ಮ ತಂದೆಯ ಹೆಸರು ಪ್ರಹ್ಲಾದ ಜೋಷಿ ಎಂದು ನಮೂದು ಆಗಿರುತ್ತದೆ. ನಿಪಿ-14 ಮರಣ ಪ್ರಮಾಣ ಪತ್ರದಲ್ಲಿ ನಮ್ಮ ತಾಯಿ ಪರಿಮಳರವರದು ಆಗಿರುತ್ತದೆ ಅದರಲ್ಲಿ ನಮ್ಮ ತಂದೆಯ ಹೆಸರು ಪ್ರಹ್ಲಾದ ಕೆ ಎಂದು ನಮೂದು ಇದ್ದು, ಕೆ ಎಂದರೆ ಕುಲಕರ್ಣಿ ಆಗಿರುತ್ತದೆ. ನಮ್ಮ ಕುಟುಂಬದ ವಂಶಾವಳಿ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ನಾನು ಸದರಿ ದಾಖಲೆ ಸಿಕ್ಕರೆ ನ್ಯಾಯಾಲಯಕ್ಕೆ ಸಲ್ಲಿಸುವ ಪ್ರಯತ್ನ ಮಾಡುತ್ತೇನೆ.

9. ನನ್ನ ತಂದೆಯ ಸಹೋದರ ಮತ್ತು ಸಹೋದರಿಯರನ್ನು ಉದ್ದೇಶಪೂರ್ವಕವಾಗಿ ನಾನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಅವರ ಬಗ್ಗೆ

ನನಗೆ ಗೊತ್ತಿಲ್ಲ ಎನ್ನುತ್ತಾರೆ.  ನಮ್ಮ ತಂದೆಯವರ ಸಂಬಂಧಿಕರ ಮತ್ತು ವಂಶ ವೃಕ್ಷದ ಎಲ್ಲಾ ಮಾಹಿತಿ ನನಗೆ ಇದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಸುಳ್ಳು ದಾಖಲೆಗಳನ್ನು ಸಲ್ಲಿಸಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.